ಕೋಟಿಗಳನ್ನು ಒದಗಿಸಿದ್ದು, ದಿ: 27.06.2006ರಲ್ಲಿ ಎಲ್ಲಾ ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲಾಗಿದೆ.

ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಹಿಂದಿನ ಸಾಲಿನಂತೆಯೇ ವಿದ್ಯಾರ್ಥಿವೇತನ ನೀಡಲು ಕ್ರಮ ಕೈಗೊಳ್ಳಲಾಗಿದೆ. ಹೆಣ್ಣು ಮಕ್ಕಳ ಹಾಜರಾತಿ ವಿದ್ಯಾರ್ಥಿ ವೇತನ ನೀಡುವ ಯೋಜನೆ ಇರುವುದಿಲ್ಲ.

ಆ) ವಿದ್ಯಾರ್ಥಿವೇತನ ಪಾವತಿಸುವುದರಿಂದ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಯಾವುದೇ ತೊಂದರೆ ಇರುವುದಿಲ್ಲ.

ಇ) ವಿದ್ಯಾರ್ಥಿವೇತನ ತಡೆ ಹಿಡಿಯುವ ಬಗ್ಗೆ ಯಾವುದೇ ಆದೇಶ ಹೊರಡಿಸಿರುವುದಿಲ್ಲ ಸರ್ಕಾರವು ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮಂಜೂರಾತಿಗಾಗಿ ಅನುದಾನವನ್ನು ಒದಗಿಸಿಕೊಂಡಿದ್ದು, ಯೋಜನೆಯ ಅನುಷ್ಠಾನಕ್ಕಾಗಿ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳಿಗೆ ಹಂಚಿಕೆ ಮಾಡಲಾಗಿದೆ. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿಗಳನ್ನು ಸ್ವೀಕರಿಸಿ, ಮಂಜೂರಾತಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

1300(1589) ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರಿಗೆ ನಿರ್ಮಿಸಲಾಗಿರುವ ವಸತಿ ಶಾಲೆಗಳೇಷ್ಟು;

ಆ) ಅವುಗಳಲ್ಲಿ ಬಾಡಿಗೆ ಹಾಗೂ ಸ್ವಂತ ಕಟ್ಟಡಗಳಲ್ಲಿ ನಡೆಸಲಾಗುತ್ತಿರುವ ವಸತಿ ಶಾಲೆಗಳೇಷ್ಟು;

ಇ) ಈ ವಸತಿ ನಿಲಯಗಳಿಗೆ ಇದುವರೆಗೂ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು. (ತಾಲ್ಲೂಕುವಾರು ಮಾಹಿತಿ ನೀಡುವುದು)?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಅಲ್ಪಸಂಖ್ಯಾತರ ಇಲಾಖೆಯಿಂದ 22 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ.

ಆ) 19 ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. 3 ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಇ) ಪ್ರಸಕ್ತ ಸಾಲಿನಲ್ಲಿ ಅಲ್ಪಸಂಖ್ಯಾತರ ವಸತಿ ಶಾಲೆಗಳಿಗಾಗಿ ಜಿಲ್ಲಾ ವಲಯದಲ್ಲಿ ರೂ. 369.00 ಲಕ್ಷಗಳ ಆಯವ್ಯಯವನ್ನು ಒದಗಿಸಲಾಗಿದೆ.

ತಾಲ್ಲೂಕುವಾರು ವಿವರ ಅನುಬಂಧದಲ್ಲಿ ಲಗತ್ತಿಸಲಾಗಿದೆ. ಉತ್ತರಿಸಬೇಕಾದ ದಿನಾಂಕ : 13–07–2006

ಶ್ರೀ ಅಂಜನಾಮೂರ್ತಿ, ವಿಧಾನ ಸಭೆಯ ಸದಸ್ಯರು (ನೆಲಮಂಗಲ) ರವರ ಚುಕ್ಕೆ ಗುರುತಿನ ಪ್ರಶ್ನೆಯ ಸಂಖ್ಯೆ 1589ಕ್ಕೆ ಅನುಬಂಧ.

ಕ್ರ.ಸ	ಜಿಲ್ಲೆಗಳು	ಮಂಜೂರು ಸ್ಥಳಗಳು	
1	ಬೆಂಗಳೂರು–ಗ್ರಾ	ಮಾಗಡಿ	ಪ್ರಾರಂಭಿಸಲಾಗಿದೆ
2	ಬಾಗಲಕೋಟೆ	ಬಾಗಲಕೋಟೆ	ಪ್ರಾರಂಭಿಸಲಾಗಿದೆ
3	ಬೆಳಗಾಂವ	ಬೆಳಗಾಂವ	ಪ್ರಾರಂಭಿಸಲಾಗಿದೆ
4	ಬಳ್ಳಾರಿ	ಬಳ್ಳಾರಿ	ಪ್ರಾರಂಭಿಸಲಾಗಿದೆ
5	ಬೀದರ್	ಬೀದರ್	ಪ್ರಾರಂಭಿಸಲಾಗಿದೆ
6	ಚಾಮರಾಜನಗರ	ಚಾಮರಾಜನಗರ	ಇಲ್ಲ
7	ಚಿಕ್ಕಮಗಳೂರು	ಚಿಕ್ಕಮಗಳೂರು	ಪ್ರಾರಂಭಿಸಲಾಗಿದೆ
8	ಚಿತ್ರದುರ್ಗ	ಚಿತ್ರದುರ್ಗ	ಪ್ರಾರಂಭಿಸಲಾಗಿದೆ
9	ದಾವಣಗೆರೆ	ಕೆರೆಬಿಳಚಿ	ಪ್ರಾರಂಭಿಸಲಾಗಿದೆ
10	ಧಾರವಾಡ	1) ಹುಬ್ಬಳ್ಳಿ	ಒಂದು
		2) ಹುಬ್ಬಳ್ಳಿ	ಪ್ರಾರಂಭಿಸಲಾಗಿದೆ
11	ಗದಗ	ಗದಗ	ಪ್ರಾರಂಭಿಸಲಾಗಿದೆ
12	ಗುಲ್ಬರ್ಗಾ ಜೇವರ್ಗಿ	ಗದಗ	ಪ್ರಾರಂಭಿಸಲಾಗಿದೆ
13	ಹಾಸನ	ಹಾಸನ	ಇಲ್ಲ
14	ಕೋಲಾರ	ಕೋಲಾರ	ಇಲ್ಲ
15	ಕೊಪ್ಪಳ	1) ಕೊಪ್ಪಳ	ಒಂದು
		2) ಯಲಬುರ್ಗಾ	ಪ್ರಾರಂಭಿಸಲಾಗಿದೆ
16	ಮೈಸೂರು	ಮೈಸೂರು	ಪ್ರಾರಂಭಿಸಲಾಗಿದೆ
17	ರಾಯಚೂರು	ಮಾನ್ವಿ	ಇಲ್ಲ
18	ಶಿವಮೊಗ್ಗ	ಶಿವಮೊಗ್ಗ	ಪ್ರಾರಂಭಿಸಲಾಗಿದೆ
19	ಉತ್ತರ ಕನ್ನಡ	ದಾಂಡೇಲಿ	ಪ್ರಾರಂಭಿಸಲಾಗಿದೆ